ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ವಿಷಯ: ಕಿರು ಸಂಶೋಧನಾ ಯೋಜನೆಯನ್ನು 2019-20ನೇ ಸಾಲಿನಲ್ಲಿ ಮಂಜೂರು ಮಾಡಿರುವ ಬಗ್ಗೆ.

ಉಲ್ಲೇಖ:1. ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 20/07/2019 ರಂದು ನಡೆದ ಸಭೆಯ ನಡಾವಳಿ.

2. ನಿರ್ದೇಶಕರು, ಪಿಎಂಇಬಿ ಇವರ ಟಿಪ್ಪಣಿ ಪತ್ರ ಸಂಖ್ಯೆ: ಪಿಎಂಇಬಿ/20/2017-18/182, ದಿನಾಂಕ: 04/09/2019

3. ಸನ್ಮಾನ್ಯ ಕುಲಪತಿಗಳ ಆದೇಶದ ದಿನಾಂಕ: 13/09/2019

*****

**<u>ಆದೇಶ ಸಂಖ್ಯೆ, ಡಿವಿ6/375/MRP/2017-18, ದಿನಾಂಕ:೨೧ –09-2019</u>**

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ವಿಶ್ವವಿದ್ಯಾನಿಲಯದ ವತಿಯಿಂದ ಕಿರು ಸಂಶೋಧನಾ ಯೋಜನೆಗೆ (Minor Research Project) ರೂ. 75,000/– (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ) ಗಳ ಆರ್ಥಿಕ ಸಹಾಯದೊಂದಿಗೆ ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಅಧ್ಯಯನ ವಿಭಾಗಗಳಲ್ಲಿನ ಈ ಕೆಳಕಂಡ 06 ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಯೋಜನೆಯನ್ನು ಮಂಜೂರು ಮಾಡಲಾಗಿದೆ.

| Sl. No | Name | Project Name |
|---|---|---|
| | ***Faculty of Science & Technology*** | |
| 1 | Dr.M.S. Krishna, Assistant Professor DOS in Zoology Manasagangotri, Mysuru | Paraquat Induced Oxidative Stress Effects on Male Accessory Gland and Sperms Traits in Drosophila Melanogaster |
| 2 | Dr. M.N. Anil Kumar, Associate Professor DOS in Sericulture Science, Manasagangotri, Mysuru | Impact of Fortification of Mulberry Leaf with Vitamins on Biomolecules and Economic Parameters of Silkworm, Bombyxmori L |
| 3 | Dr. Mahadevaiah, Associate Professor DOS in Sugar Technology, Sri M Visveswaraya P.G. Centre Tubinakere, Mandya | Comparison Study on Physico-Chemical Properties of filter cake from different Sugar Factories of Southern Karnataka |
| | ***Faculty of Social Science*** | |
| 4 | Dr.M.Meera Assistant Professor DOS in Institute of Development Studies (IDS), Manasagangotri, Mysore | The Dynamics of Women Leadership in Co-operatives: A study of Selction Co-operatives in Mysuru District, Karnataka |
| 5 | Dr.V.Shobha, Assistant Professor DOS in Ancient History & Archaeology, Manasagangotri, Mysore | Megalithic-Early Historical Landscape of the Hoogya Valley, Kollegal Taluk, Chamarajanagar district, Karnataka |
| | ***Faculty of Commerce*** | |
| 6 | Dr.Amulya M Assistant Professor DOS in Business Administration (BIMS), Manasagangotri, Mysuru | Consumer Protection Act-A Study of Awareness & Redressal Seeking in Mysore District |

..2

Scanned by CamScanner

ಅನುದಾನ ಬಳಕೆ ಮಾಡುವ ಸಂಬಂಧ ಷರತ್ತುಗಳು:-

1. ಸಂಶೋಧನಾ ಯೋಜನೆಯನ್ನು ಆದೇಶದ ದಿನಾಂಕದಿಂದ 05 ತಿಂಗಳುಗಳೊಳಗೆ ಮುಗಿಸಿ, ಯೋಜನಾ ವರದಿಯನ್ನು ಕುಲಸಚಿವರಿಗೆ ಸಲ್ಲಿಸಬೇಕು.
2. ಸಂಶೋಧನೆಗೆ 2019-20ರಲ್ಲಿ ಬಳಸಿಕೊಳ್ಳುವ ಮೊತ್ತಕ್ಕೆ ದಿನಾಂಕ: 31/01/2020ರೊಳಗೆ ಡಿ.ಸಿ. ಹುಂಡಿ ಸಲ್ಲಿಸಬೇಕು ಮತ್ತು ಬಳಕೆ ಹಣವನ್ನು ಏಪ್ರಿಲ್ 2020ರ ನಂತರ 2019-20ರ ನಿಧಿಯಿಂದ ಪಡೆದು 03 ತಿಂಗಳೊಳಗೆ ಬಳಕೆ ಪ್ರಮಾಣ ಪತ್ರ ನೀಡಬೇಕು.
3. ಸಂಶೋಧನಾ ಅನುದಾನವನ್ನು ಯಾವುದೇ ಉಪಕರಣಗಳ ಗಣಕಯಂತ್ರ ಖರೀದಿ, ಸಂಶೋಧನಾ ಸಹಾಯಕರ ನೇಮಕಾತಿ ಮತ್ತು ಶಿಷ್ಯವೇತನ ಪಾವತಿ ಮತ್ತು ವಿಚಾರ ಸಂಕಿರಣ/ಕಾರ್ಯಾಗಾರಗಳಲ್ಲಿ ಪ್ರಬಂಧ ಮಂಡನೆಯಂತಹ ಕೆಲಸಗಳಿಗೆ ಬಳಸುವಂತಿಲ್ಲ.
4. ಸಂಶೋಧನಾ ಅನುದಾನವನ್ನು ದತ್ತಾಂಶ ಸಂಗ್ರಹಣೆಗೆ ಮತ್ತು ಈ ಸಂಬಂಧದ ಪ್ರಯಾಣ/ದಿನ ಭತ್ಯೆಗಳಿಗೆ, ಪ್ರಯೋಗಕ್ಕೆ ಬೇಕಾಗುವ ರಸಾಯನಿಕ ಇನ್ನಾವುದೇ ಬಳಕೆ ವಸ್ತುಗಳಿಗೆ, ಲೇಖನ ಸಾಮಾಗ್ರಿಗಳು, ದತ್ತಾಂಶ ಸಂಸ್ಕರಣೆ ಮತ್ತು ವರದಿಯ ಪ್ರಕಟಣೆಗಳಿಗೆ ನಿಯಮಾನುಸಾರ ವಿನಿಯೋಗಿಸಬಹುದು.
5. ಮೇಲಿನ ಉದ್ದೇಶಗಳಲ್ಲಿ ಹೆಸರಿಸಿಲ್ಲದ ಇನ್ನಾವುದೇ ನಿರ್ದಿಷ್ಟ ಉದ್ದೇಶಕ್ಕೆ ಅನುದಾನದ ಹಣ ಬಳಸಬೇಕಿದ್ದಲ್ಲಿ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯಬೇಕು.
6. ಅಂತರಾಷ್ಟ್ರೀಯ ಜರ್ನಲ್/ಎಸ್‌ಸಿಐ ಜರ್ನಲ್‌ನಲ್ಲಿ ಕನಿಷ್ಠ ಪಕ್ಷ ಎರಡು ಸಂಶೋಧನಾ ಲೇಖನಗಳನ್ನು ಪ್ರಕಟಿಸಿರಬೇಕು.
7. ಯೋಜನೆಯ ಸಂಶೋಧನಾ ಫಲಿತಾಂಶಗಳ ಆಧಾರದಲ್ಲಿ ಪ್ರಕಟಿಸುವ ಯಾವುದೇ ಲೇಖನ/ಪುಸ್ತಕಗಳಲ್ಲಿ "ಈ ಪ್ರಕಟಣೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕಿರು ಸಂಶೋಧನಾ ಅನುದಾನದ ಮೂಲಕ ನಡೆಸಿದ ಸಂಶೋಧನೆಯ ಆಧಾರದಲ್ಲಿ ರಚಿಸಲಾಗಿದೆ" ಎಂದು ಹೆಸರಿಸಬೇಕು.
8. **ಯೋಜನಾ ಅವಧಿಯನ್ನು ಯಾವುದೇ ಕಾರಣಕ್ಕೂ ಮುಂದುವರೆಸಲಾಗುವುದಿಲ್ಲ ಮತ್ತು ನಿಗಧಿತ ಸಮಯದೊಳಗೆ ಯೋಜನಾ ವರದಿ ಮತ್ತು ಖರ್ಚಾಗಳಾಗಿರುವ ಮೊತ್ತವನ್ನು ಡಿ.ಸಿ.ಪೇಯಬಲ್ ಮೂಲಕ ಪಾವತಿಸಬೇಕು ವಿಳಂಬವಾದಲ್ಲಿ ಸಂಬಂಧಪಟ್ಟವರೆ ನೇರ ಹೊಣೆಗಾರರಾಗಿರುತ್ತಾರೆ.
9. ಸದರಿ ಕಿರು ಸಂಶೋಧನಾ ಯೋಜನೆಗೆ ಒಬ್ಬರು ಒಂದು ಬಾರಿ ಮಾತ್ರ ಪ್ರಸ್ತಾವನೆ ಸಲ್ಲಿಸಲು ಅರ್ಹರಿರುತ್ತಾರೆ.
10. ಕಿರು ಸಂಶೋಧನಾ ಯೋಜನೆಯನ್ನು ಇಂಗ್ಲೀಷ್ ಅಥವಾ ಕನ್ನಡ ಭಾಷೆಯಲ್ಲಿ ಮಾಡಬಹುದಾಗಿದ್ದು, ಸಂಪಾದನೆಗೊಂಡ ಪೂರ್ಣವರದಿಯನ್ನು Calico/Hard binding ಮೂಲಕ ಸಲ್ಲಿಸಬೇಕು ಇಲ್ಲವಾದಲ್ಲಿ ಅಂತಹದನ್ನು ಸ್ವೀಕರಿಸಲಾಗುವುದಿಲ್ಲ.
11. ಮೇಲಿನ ಎಲ್ಲಾ ಅಂಶಗಳಿಗೆ ಒಪ್ಪಿಗೆಯಾದಲ್ಲಿ ವಿಶ್ವವಿದ್ಯಾನಿಲಯದಿಂದ ಕಿರು ಸಂಶೋಧನಾ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.

ಮೇಲಿನ ವೆಚ್ಚಗಳನ್ನು 2019-20ನೇ ಸಾಲಿನ ಆಯವ್ಯಯ ಅಂದಾಜು ಪುಸ್ತಕದ ಬೋಧನೆ/ಸಂಶೋಧನೆ/ವಿಸ್ತರಣಾ ಚಟುವಟಿಕೆಗಳು–271ರ ***"ಕಿರು ಸಂಶೋಧನಾ ಯೋಜನೆಗಳಿಗಾಗಿ ಸಹಾಯಧನ"*** ಶೀರ್ಷಿಕೆಯಿಂದ ಭರಿಸುವುದು.

ಆದೇಶದ ಮೇರೆಗೆ,

(ಸಹಿ) 2/9/19

ಕುಲಸಚಿವ

ಪ್ರತಿ:

1. ಸಂಬಂಧಪಟ್ಟ ಅಧ್ಯಾಪಕರುಗಳಿಗೆ,
2. ಸಂಬಂಧಪಟ್ಟ ಎಲ್ಲಾ ಅಧ್ಯಕ್ಷರು/ವಿಭಾಗದ ಮುಖ್ಯಸ್ಥರುಗಳಿಗೆ, ಮಾನಸಗಂಗೋತ್ರಿ, ಮೈಸೂರು.
3. ನಿರ್ದೇಶಕರು, ಸರ್ ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ, ಮಂಡ್ಯ.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಮಾನ್ಯ ಕುಲಪತಿಯವರ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಛೇರಿ ಪ್ರತಿ.

Scanned by CamScanner